ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಶನಿವಾರ 3 ನೇ ಸೆಪ್ಟೆಂಬರ್ 1994

3 rd September 1994

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ

ಸಭಾಂಗಣದಲ್ಲಿ ಬೆಳಿಗ್ಗೆ 11.30 ಗಂಟೆಗೆ
ಸಮಾವೇಶಗೊಂಡಿತು

ಅಧ್ಯಕ್ಷರು : (ಶ್ರೀ ವಿ.ಎಸ್ ಕೌಜಲಗಿ) ಅವರು

ಪೀಠವನ್ನು ಅಲಂಕರಿಸಿದ್ದರು

-:0:-

ಅಧ್ಯಕ್ಷರ ಅಪ್ಪಣೆ ಕೋರಿ ಪ್ರಸ್ತಾಪಿಸಲಾದ ವಿಷಯ

ವಿಷಯ : ಬೆಂಗಳೂರಿನಲ್ಲಿರತಕ್ಕ ಅತ್ಯಂತ ಬೆಲೆಬಾಳುವ ಭೂಮಿ ಪರರ ಪಾಲು ಆಗುತ್ತಿರುವ ಬಗ್ಗೆ

*ಶ್ರೀ ಸಿ.ಬೈರೇಗೌಡ (ವೇಮಗಲ್) :- ಸನ್ಮಾನ್ಯ ಅಧ್ಯಕ್ಷರೇ, ವಿರೋಧ ಪಕ್ಷದ ಉಪನಾಯಕರಾದ ಸಿದ್ಧಾ ಅವರು, ವಾಟಾಳ್ ನಾಗರಾಜ್ ಅವರು ಹಾಗೂ ನಾನು ತಮ್ಮನ್ನು ಭೇಟಿ ಮಾಡಿ ಒಂದು ಪ್ರಮುಖವಾದ ವಿಚಾರವನ್ನು ಸಭೆಯ ಹಾಗೂ ಸರ್ಕಾರದ ಗಮನಕ್ಕೆ ತರಬೇಕು ಎಂದು ಇಚ್ಚಿಸಿದ್ದೆವು. ವಿಷಯ ಏನು ಎಂದರೆ, ಇವತ್ತು ಬೆಂಗಳೂರಿನಲ್ಲಿ ಇರತಕ್ಕ ಅತ್ಯಂತ ಬೆಳೆಬಾಳತಕ್ಕ ಭೂಮಿ ಪರರ ಪಾಲು ಆಗುತ್ತಾ ಇದೆ. ಹಿಂದೆಯೂ ಕೂಡ ಭೂಮಿ ಹಗರಣಗಳು ಸಾಕಷ್ಟು ನಡೆದಿವೆ. ಆ ವಿಚಾರಗಳನ್ನು ಈಗ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಇವತ್ತು ನೇರವಾಗಿ ವಿಷಯಕ್ಕೆ ಬಂದರೆ, ಬೆಂಗಳೂರು ನಗರದಲ್ಲಿ ಇರತಕ್ಕ ಹೈಗ್ರೌಂಡ್ಸ್‌ಗೆ ಸಂಬಂಧಪಟ್ಟಿರತಕ್ಕದ್ದು. ಅದು ಕಬ್ಬನ್ ಪಾರ್ಕ್‌ನ ಒಂದು ಅಂಗ ಆಗಿರತಕ್ಕ ಭಾಗ. ಈಗ ಪ್ಲಾನಿಟೋರಿಯಂ ಏನಿದೆ ಅಲ್ಲಿ ಅದರ ಪಕ್ಕದಲ್ಲಿ ಮೊದಲು ಎಲ್‌ಆರ್‌ಡಿಇ ಎನ್ನತಕ್ಕ ಸಂಸ್ಥೆ ಇತ್ತು. ಆ ಸಂಸ್ಥೆಯ ಜಮೀನಿನ ವಿಸ್ತೀರ್ಣ ಸುಮಾರು

17 ಎಕರೆ ಆಗಿದೆ. ಆ ಜಾಗ ಅತ್ಯಂತ ಆಯಕಟ್ಟಿನ ಸ್ಥಳದಲ್ಲಿ ಇದೆ. ಅದು ಇಡೀ ಬೆಂಗಳೂರಿಗೇ ಅತ್ಯಂತ ಎತ್ತರವಾದ ಪ್ರದೇಶ. ಮತ್ತು ಸುತ್ತಲೂ ಕೂಡ ಬಹಳ ಕಛೇರಿಗಳು ಮತ್ತು ಪ್ರತಿಷ್ಠಿತವಾದಂತಹ ಸಂಸ್ಥೆಗಳು ಇವೆ. ಅಲ್ಲಿ ಒಂದು ಕಡೆ ಆಕಾಶವಾಣಿ ಇದೆ, ಇನ್ನೊಂದು ಕಡೆ ಪ್ಲಾನಿಟೋರಿಯಂ ಇದೆ, ಮಗದೊಂದು ಕಡೆ ವಾಟರ್ ಟ್ಯಾಂಕ್ ಇದೆ ಹಾಗೂ ಮುಖ್ಯವಾದಂತಹ ರಸ್ತೆಯಲ್ಲಿ ಆ ಜಾಗ ಇದೆ. ಇದು ರಾಜಭವನಕ್ಕೆ ಪಕ್ಕದಲ್ಲಿರತಕ್ಕ ರಸ್ತೆಯ ಅಂಚಿನಲ್ಲಿದೆ. ಮತ್ತೆ ಆ ಜಾಗದಲ್ಲಿ ಬರುವ ರಸ್ತೆ ಗಣ್ಯ ಅತಿಥಿಗಳು ಓಡಾಡತಕ್ಕ ಜಾಗ ಆಗಿದೆ. ಇಂತಹ ರಸ್ತೆಯ ಪಕ್ಕದಲ್ಲಿ ಇರತಕ್ಕ ಜಾಗವನ್ನು ಖಾಸಗಿಯವರಿಗೆ ಕೊಟ್ಟು ಅಲ್ಲಿ ಕನ್ವೆನ್‌ಷನ್ ಸೆಂಟರ್ ಕಟ್ಟಿಸಬೇಕೆಂದು ಹೇಳುತ್ತಿದ್ದಾರೆ. ಆ ಕನ್ವೆನ್‌ಷನ್ ಸೆಂಟರ್ ಅವಶ್ಯಕತೆ ಇಲ್ಲ, ಅದನ್ನು ಕಟ್ಟಬಾರದು ಎನ್ನತಕ್ಕ ಉದ್ದೇಶ ನಮ್ಮದಂತೂ ಅಲ್ಲ. ಬೆಂಗಳೂರು ದೇಶದಲ್ಲಿಯೇ ಒಂದು ಸುಂದರವಾದ ನಗರ . ಇಲ್ಲಿ ಅಂತರರಾಷ್ಟ್ರೀಯ ಸಭೆಗಳು ನಡೆಯುವುದಾದರೆ ಅದನ್ನು ನಾವು ಸ್ವಾಗತಿಸುತ್ತೇವೆ. ಆದರೆ ಯಾವ ಸ್ಥಳದಲ್ಲಿ ಇಂತಹ ಒಂದು ಕೇಂದ್ರವನ್ನು ಕಟ್ಟಬೇಕು ಎನ್ನತಕ್ಕದ್ದು ಪ್ರಮುಖವಾದ ವಿಷಯ. ಹಾಗೂ ಯಾರು ಕಟ್ಟಬೇಕು ಎನ್ನತಕ್ಕದ್ದು ಪ್ರಮುಖವಾದ ವಿಚಾರ. ಸರ್ಕಾರದವರು ಈಗ ಹೇಳುವುದು ಏನೆಂದರೆ, ಕೆಲವು ಹೋಟೆಲ್‌ಗಳನ್ನು ನಾವು ಕೇಳಿದೆವು, ಅಶೋಕಾ ಹೋಟೆಲ್, ವಿಂಡ್ಸರ ಮ್ಯಾನರ್ ಮುಂತಾದ ಹೋಟೆಲ್‌ಗಳನ್ನು ಕೇಳಿದೆವು, ಅವರು ಅದಕ್ಕೆ ಒಪ್ಪಿಗೆ ಕೊಡಲಿಲ್ಲವಾದ್ದರಿಂದ ಇವತ್ತು ಅದನ್ನು ಸಿಂಗಪೂರ್‌ನಲ್ಲಿ ಇರತಕ್ಕ ಒಂದು ಸಂಸ್ಥೆಗೆ ಕೊಡತಕ್ಕ ವ್ಯವಹಾರ ನಡೆಯುತ್ತಿದೆ ಎಂದು ಹೇಳುತ್ತಾರೆ. ಏಕೆ ಈ ವಿಚಾರ ಬಹಳ ಗಹನವಾದುದು ಎಂದರೆ, ಹಿಂದೆ ಇವರು ಯಾರಿಗೆ ಆಫರ್ಸ್‌ನ್ನು ಕೇಳಿದ್ದಾರೆ ಅವರಿಗೆ ಆಗ ಹಾಕಿದ ಕಂಡೀಷನ್ಸ್ ಏನು ಇತ್ತು ಅದರ ಪ್ರಕಾರ ಅವರು ಒಪ್ಪಿಗೆ ಕೊಡುವುದಕ್ಕೆ ಸಾಧ್ಯವೇ ಇರಲಿಲ್ಲ. ಅವರು ಒಪ್ಪಿಗೆಯನ್ನು ಕೊಡುವುದಕ್ಕೆ ಆಗದೇ ಇರಬೇಕೆನ್ನುವ ಉದ್ದೇಶವನ್ನು ಇಟ್ಟುಕೊಂಡೇ ಆ ಕಂಡೀಷನ್‌ಗಳನ್ನು ಈ ಅಶೋಕಾ ಹೋಟೆಲ್ ವಿಂಡ್ಸರ್ ಮ್ಯಾನರ್ ಅಥವಾ ಬೇರೆ ಹೋಟೆಲ್‌ನವರಿಗೆ ಹಾಕಿದರು. ಸ್ವಾಭಾವಿಕವಾಗಿ ಅವರು ಆಗುವುದಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ಈಗ ಅದು ಏನಾಗಿದೆ? ಮಾನ್ಯ ಮುಖ್ಯಮಂತ್ರಿಗಳು ಅಮೇರಿಕಾ ಪ್ರವಾಸ ಹೋಗಿ ಬಂದಿದ್ದಾರೆ. ಲಾಸ್ ಏಂಜಲೀಸ್‌ನಲ್ಲಿ ಅವರು ಒಂದು ಪತ್ರಿಕಾ ಸಮ್ಮೇಳನ ನಡೆಸಿದ್ದಾರೆ. ಅದರ ವಿವರ ''ಇಂಡಿಯಾ ಅಬ್ರಾಡ್'' ಎನ್ನತಕ್ಕ ಪತ್ರಿಕೆಯಲ್ಲಿ ಬಂದಿದ್ದು ಅದನ್ನು ನಾನು ತಮಗೆ ಆ ನಂತರ ಕಳುಹಿಸಿಕೊಡುತ್ತೇನೆ. ಅಲ್ಲಿ ಅವರು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ, ಬೆಂಗಳೂರು ನಗರದಲ್ಲಿ ಒಂದು ಇಂಟರ್‌ನ್ಯಾಷನಲ್ ಕನ್ವೆನ್‌ಷನ್ ಸೆಂಟರ್ ಕಟ್ಟುತ್ತೇವೆ ಎನ್ನುವ ಮಾತನ್ನು ಅಮೇರಿಕಾ ದೇಶದಲ್ಲಿ ಹೇಳಿದ್ದಾರೆ. ಇದನ್ನು ನಾವು ಸ್ವಾಗತ ಮಾಡುತ್ತೇವೆ. ಅದನ್ನು ಬೇಡ ಎಂದು ಹೇಳುವುದಿಲ್ಲ. ಅದನ್ನು ಕಟ್ಟಲಿ ಮಾನ್ಯ ಮುಖ್ಯಮಂತ್ರಿಗಳು ನನ್ನ ಒಂದು ಪ್ರಶ್ನೆಗೆ ಉತ್ತರ ಕೊಡುತ್ತಾ ಅವರ ಭೇಟಿ ಖಾಸಗಿ ಪ್ರವಾಸ ಎಂದು ಹೇಳಿದ್ದಾರೆ. ಖಾಸಗೀ ಪ್ರವಾಸ ಆದರೂ ಕೂಡಾ ಅನೇಕ ಸಮಸ್ಯೆಗಳ ಬಗ್ಗೆ ವಿಶ್ವಬ್ಯಾಂಕ್ ಜೊತೆ ಮಾತನಾಡಿದ್ದೇವೆ ಎಂದು, ಪವರ್ ಪ್ರಾಜೆಕ್ಟ್ಸ ಬಗ್ಗೆ ಹಾಗೂ ಇನ್ನೂ ಕೆಲವು ವಿಚಾರಗಳ ಬಗ್ಗೆ ಮಾತನಾಡಿದ್ದೇವೆ ಎಂದು ನನ್ನ ಪ್ರಶ್ನೆಗೆ ಲಿಖಿತ ಉತ್ತರದಲ್ಲಿ ಕೊಟ್ಟಿದ್ದಾರೆ. ಆ ವಿಚಾರ ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಅಂತಹ ಸಂದರ್ಭದಲ್ಲಿ ಅಮೇರಿಕಾದ ಲಾಸ್ ಎಂಜಿಲೀಸ್‌ನಲ್ಲಿ ಈ

ವಿಚಾರ ಪ್ರಸ್ತಾಪ ಮಾಡಿದ್ದಾರೆ. ಈ ಪ್ರವಾಸವನ್ನು ಯಾರು ವ್ಯವಸ್ಥೆ ಮಾಡಿದ್ದರು, ಈ ಪ್ರವಾಸದ ಲಾಭವನ್ನು ಯಾರು ಪಡೆದಿದ್ದರು ಅವರಿಗೆ ಈ ಭೂಮಿಯನ್ನು ಕೊಡತಕ್ಕ ಒಂದು ಹೊಂಚು ಇವತ್ತಿನದಿವಸ ನಡೆಯುತ್ತಿದೆ. ಮೊದಲು ಅಶೋಕಾ ಹೋಟೆಲ್ ಹಾಗೂ ವಿಂಡ್ಸರ್ ಮ್ಯಾನರ್ಸ್‌ಗೆ ಏನು ಕಂಡೀಷನ್ಸ್ ಹಾಕಿದ್ದರು ಅದನ್ನು ಸಡಿಲಗೊಳಿಸಿದ್ದಾರೆ. ನೀವು ಇವತ್ತು ಅಲ್ಲಿ ಬರೀ ಕನ್ವೆನ್‌ಷನ್ ಸೆಂಟರ್ ಮಾತ್ರವಲ್ಲದೇ ಪಂಚತಾರಾ ಹೋಟೆಲನ್ನು ಮತ್ತು ಟ್ರಾನ್ಸಿಟ್ ಫ್ಲಾಟ್‌ನ್ನು ಕಟ್ಟುವುದಕ್ಕೆ ಅವಕಾಶ ಕೊಟ್ಟು, ಎಂದರೆ ಮೊದಲು ಏನು ಒಂದು ನಿಬಂಧನೆಗಳು ಇದ್ದವು ಆ ನಿಬಂಧನೆಗಳನ್ನು ಇವತ್ತು ಸಡಿಲಿಸಿ ಇವರಿಗೆ ಬೇಕಾಗಿರತಕ್ಕವರಿಗೆ ಕೊಡತಕ್ಕಂತಹ, ಅವರಿಗೆ ಹೊಂದಿಕೊಳ್ಳತಕ್ಕಂತಹ ನಿಬಂಧನೆಗಳನ್ನು ಇವತ್ತು ಸರ್ಕಾರ ಹಾಕಿದೆ. ಸುಮಾರು 50 ಕೋಟಿ ರೂಪಾಯಿಯಷ್ಟು ಬೆಳೆಬಾಳತಕ್ಕ ನಮ್ಮ ಆಸ್ತಿ ಏನು ಇದೆ, ಈ ಸರ್ಕಾದ ಆಸ್ತಿ ಏನಿದೆ ಇದು ಪರರ ಪಾಲು ಆಗತಕ್ಕ ಒಂದು ಹೊಂಚು, ಸಂಚು ಇವತ್ತಿನ ದಿವಸ ನಡೆಯುತ್ತಿದೆ. ಇದನ್ನು ನಾವು ಇಲ್ಲಿ ತೀವ್ರವಾಗಿ ಪ್ರಸ್ತಾಪ ಮಾಡದೇ ಇದ್ದರೆ ಮತ್ತು ನಮ್ಮ ಸರ್ಕಾರದ ಆಸ್ತಿಯನ್ನು ರಕ್ಷಣೆ ಮಾಡದೇ ಇದ್ದರೆ ನಾವು ಕರ್ತವ್ಯಲೋಪ ಮಾಡಿದಹಾಗೆ ಆಗುತ್ತದೆ ಎನ್ನುವ ದೃಷ್ಟಿಯಿಂದ ನಾವು ಇವತ್ತು ಪ್ರಸ್ತಾಪ ಮಾಡಿದ್ದೇವೆ. ಮೊದಲು ಯಾವ ನಿಬಂಧನೆಗಳನ್ನು ಅಶೋಕ ಹಾಗೂ ವಿಂಡ್ಸರ್ ಮ್ಯಾನರ್ ಹಾಗೂ ಇತರೆ ಹೋಟೆಲ್‌ಗಳಿಗೆ ಹಾಕಿದ್ದರೋ ಆ ನಿಬಂಧನೆಗಳನ್ನು ಸಡಿಲಿಸಿರುವುದಕ್ಕೆ ಕಾರಣ ಏನು? ಆ ನಿಬಂಧನೆಗಳನ್ನು ಸಡಿಲಿಸಕೂಡದು. ಆ ಇಂಟರ್ ನ್ಯಾಷನಲ್ ಕನ್ವೆನ್‌ಷನ್ ಸೆಂಟರ್ ಇಲ್ಲಿಗೆ ಬರಬೇಕು. ಆದರೆ ಇಂತಹ ಆಯಕಟ್ಟಿನ ಸ್ಥಳದಲ್ಲಿ ಅಲ್ಲ. ಇವತ್ತು ಬೆಂಗಳೂರಿನಲ್ಲಿ ವಾಯುಮಾಲಿನ್ಯ ಏನಾಗಿದೆ ಎಂದು ತಾವು ನೋಡುತ್ತಿದ್ದೀರಿ. ಆ ಜಾಗದಲ್ಲಿ ಯಥೇಚ್ಛವಾಗಿ ಮರಗಳು ಬೆಳೆದಿವೆ. ಅಲ್ಲಿ ಬೆಲೆಬಾಳತಕ್ಕ ವೃಕ್ಷಸಂಪತ್ತು ಅಲ್ಲಿ ಇದೆ. ಇದೆಲ್ಲವನ್ನೂ ಹಾಳುಮಾಡತಕ್ಕ ಒಂದು ವ್ಯವಸ್ಥೆ ಇದಾಗಿದೆ. ಸುತ್ತಲೂ ರಾಜಭವನ, ಆಕಾಶವಾಣಿ, ವಿಧಾನಸೌಧವೂ ಪಕ್ಕದಲ್ಲೇ ಇದೆ. ಯಾವುದೇ ಕಾರಣಕ್ಕೆ ಆ ಜಾಗ ಬೇರೆಯವರ ಪಾಲು ಆಗದಂತೆ ನೋಡಿಕೊಳ್ಳಬೇಕಾಗಿರತಕ್ಕದ್ದು ಸರ್ಕಾರದ ಕರ್ತವ್ಯ. ಮತ್ತು ಏನು ತಮಗೆ ಇಷ್ಟ ಇರತಕ್ಕವರಿಗೇ ಕೊಡಬೇಕೆಂದು ಸಂಚನ್ನು ನಡೆಸುತ್ತಿದ್ದಾರೆ. ಸಿಂಗಪೂರ ಕಂಪೆನಿಯವರಿಗೇ ಕೊಡಬೇಕು ಎನ್ನತಕ್ಕ ಸಂಚು ಏನು ನಡೆಯುತ್ತಿದೆ, ಈ ಸಂಚಿಗೆ ಅವಕಾಶ ಇಲ್ಲದ ರೀತಿಯಲ್ಲಿ ಸರ್ಕಾರ ನಡೆದುಕೊಳ್ಳಬೇಕು ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತಿದ್ದೇನೆ.

* ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ) :- ಮಾನ್ಯ ಅಧ್ಯಕ್ಷರೇ, ಬಹಳ ಮುಖ್ಯವಾದ ವಿಚಾರವನ್ನು ಮಾನ್ಯ ಬೈರೇಗೌಡರು ಪ್ರಸ್ತಾಪ ಮಾಡಿದ್ದಾರೆ. ಅವರ ಭಾವನೆಗಳಿಗೆ ಹಾಗೂ ವಿಷಯಗಳಿಗೆ ನಾನು ಸ್ಪಂದಿಸಿ ಒಂದು ಮಾತನ್ನು ಹೇಳುತ್ತಿದ್ದೇನೆ. ವಿಧಾನಸೌಧದ ಸುತ್ತಮುತ್ತ ಯಾವುದೇ ಕಟ್ಟಡಗಳನ್ನು ಕಟ್ಟಬೇಕಾದರೂ ಕೂಡ ವಿಶೇಷವಾದ ಒಂದು ಆಜ್ಞೆಯನ್ನು ಸರ್ಕಾರ ಹೊರಡಿಸಬೇಕಾಗುತ್ತದೆ. ನಾನು ಒಂದು ಸಣ್ಣ ಉದಾಹರಣೆ ಹೇಳಬೇಕೆಂದರೆ, ನಾನು ಸಾರಿಗೆ ಸಚಿವನಾಗಿದ್ದ ಸಂದರ್ಭದಲ್ಲಿ ಒಂದು ವಿಚಾರ ಬಂತು. ಪೋಸ್ ಅಂಡ್ ಟೆಲಿಗ್ರಾಫ್ ಕಛೇರಿ ಮುಂದುಗಡೆ ಅವರ ಕಛೇರಿಯ ನೌಕರರು ಬಸ್‌ಗಾಗಿ ನಿಲ್ಲುವ ಜಾಗದಲ್ಲಿ ಒಂದು ಬಸ್ ಶೆಲ್ಟರ್ ಕಟ್ಟಬೇಕೆಂಬ ವಿಚಾರ ಬಂದಾಗ ಅದು ಹೀಗೆ

ಇರಬೇಕು. ಇಷ್ಟೇ ಕಟ್ಟಬೇಕೆಂಬ ನಿಬಂಧನೆ ಹಾಕಿ ಅದನ್ನು ಕಟ್ಟಬೇಕಾದರೆ ಸುಮಾರು 2 ವರ್ಷ ಕಾಲ ಹಿಡಿಯಿತು. ಅಂತಹ ಒಂದು ಕಾನೂನನ್ನು ನಾವು ಮಾಡಿದ್ದೇವೆ. ನಾವು ಏಕೆ ಮಾಡಿದ್ದೇವೆಂದರೆ, ಬೆಂಗಳೂರಿನಲ್ಲಿರತಕ್ಕ ಪರಿಸರ ಹಾಗೂ ವಾತಾವರಣವನ್ನು ನಾವು ಮುಂದುವರಿಸಿಕೊಂಡು ಹೋಗಬೇಕು ಎನ್ನುವ ದೃಷ್ಟಿಯಿಂದ. ಹಾಗೂ ಬಹಳ ಮುಖ್ಯವಾಗಿ ವಿಧಾನಸೌಧದ ಸುತ್ತಮುತ್ತ ಇರತಕ್ಕ ಕಬ್ಬನ್ ಪಾರ್ಕ್ ಏನಿದೆ, ಎಲ್‌ಆರ್‌ಡಿಇ ಜಾಗ ಏನಿದೆ ಈಕಡೆ ಇರತಕ್ಕ ಗಾಲ್ಫ್ ಗ್ರೌಂಡ್ಸ್ ಏನಿದೆ, ರೇಸ್‌ಕೋರ್ಸ್ ಏನಿದೆ ಇಲ್ಲೆಲ್ಲಾ ನಾವು ಕಟ್ಟಡಗಳನ್ನು ಕಟ್ಟುವುದಕ್ಕೆ ಪ್ರಾರಂಭ ಮಾಡಿದರೆ ಈಗಾಗಲೇ ಇರತಕ್ಕ ಕಂಜೆಷನ್ ಮತ್ತು ಟ್ರಾಫಿಕ್ಕಿಗೆ 100 ಫೋಲ್ಡ್ ಜಾಸ್ತಿಯಾಗುತ್ತದೆ. ಮಾನ್ಯ ಅಧ್ಯಕ್ಷರೇ, ತಮಗೆ ಗೊತ್ತಿರಬಹುದು. ಬೆಂಗಳೂರು ನಗರದಲ್ಲಿ ಎಲ್ಲಾ ನಮ್ಮ ಟ್ರಾಫಿಕ್ಕಿನ ಸಮಸ್ಯೆ ಏನು ಇದೆ ಎಂದರೆ, ಸುಮಾರು 13 ಲಕ್ಷ ಜನ ಇವತ್ತು ಪ್ರತಿದಿನ ಬಿ.ಟಿ.ಎಸ್ ಮುಖಾಂತರ ಪ್ರಯಾಣ ಮಾಡುತ್ತಾರೆ. ಕೇವಲ ಬಿಟಿಎಸ್ ಬಗ್ಗೆ ಮಾತ್ರ ನಾನು ಹೇಳುತ್ತಿರುವುದು. ಮತ್ತು ಇಡೀ ಇಂಡಿಯಾ ದೇಶದಲ್ಲಿ ಇವತ್ತು ಬೆಂಗಳೂರಿನಲ್ಲಿ ಇರುವಷ್ಟು ದ್ವಿಚಕ್ರ ವಾಹನಗಳನ್ನು ಬೇರೆ ಯಾವ ರಾಜ್ಯದಲ್ಲೂ, ಯಾವ ರಾಜಧಾನಿಯಲ್ಲೂ ಸಹ ಇಲ್ಲ. ಇಷ್ಟೊಂದು ಟ್ರಾಫಿಕ್ ಇರುವಾಗ ಅದಕ್ಕೆ ಪರ್ಯಾಯವಾಗಿ ಯಾವ ವ್ಯವಸ್ಥೆಯನ್ನೂ ನಾವು ಮಾಡುವುದಕ್ಕೆ ಹೋಗಿಲ್ಲ. ಈಗ ಬೆಂಗಳೂರಿನ 3 ಕಡೆಗಳಲ್ಲಿ ಹೆಚ್ಚು ಟ್ರಾಫಿಕ್ ಕಂಜೆಷನ್ ಆಗತಕ್ಕದ್ದು ಎಂದರೆ, ಒಂದು ಕೆಂಪೇಗೌಡ ಸರ್ಕಲ್ ಎರಡನೆಯದು ಕಲಾಸಿಪಾಳ್ಯಮ್ ಹಾಗೂ ಮೂರನೆಯದು ಶಿವಾಜಿನಗರ. ಈ ಮೂರೂ ಪಾಯಿಂಟ್‌ಗಳ ಮದ್ಯೆ ಬರತಕ್ಕಂತಹ ಎಲ್ಲಾ ಜಾಗದಲ್ಲಿ ನಾವು ಟ್ರಾಫಿಕ್ ಹೆಚ್ಚು ಮಾಡಲಿಕ್ಕೆ ಬಹು ಮಹಡಿ ಕಟ್ಟಡಗಳನ್ನು ಹಾಗೂ ಇಂತಹ ಸೆಂಟರ್‌ಗಳನ್ನು ಕಟ್ಟುವುದಕ್ಕೆ ಹೋದರೆ ಅದರಿಂದ ಟ್ರಾಫಿಕ್ ಕಂಜೆಷನ್ ಆಗುತ್ತದೆ. ಸಂಪೂರ್ಣವಾಗಿ ಟ್ರಾಫಿಕ್ ಜಾಮ್ ಮತ್ತಷ್ಟು ಹೆಚ್ಚಾಗುತ್ತದೆ. ಆದುದರಿಂದ ಯಾವುದೇ ರೀತಿ, ವಿಧಾನ ಸೌಧದ ಆಸುಪಾಸು, 4-5 ಕಿಲೋಮೀಟರ್ ಒಳಗಡೆ ಈ ತರಹದ ಕಟ್ಟಡಗಳನ್ನು ಖಾಸಗಿಯವರಾಗಲೀ ಅಥವಾ ಸರ್ಕಾರವೇ ಆಗಲೀ, ಅನಿವಾರ್ಯವಾದ ಸಂದರ್ಭದಲ್ಲಿ ಮಾತ್ರ ಕಟ್ಟಬೇಕೇ ವಿನಹ, ಬೇರೆ ಸಂದರ್ಭಗಳಲ್ಲಿ ಕಟ್ಟಬಾರದೆಂಬುದು ನನ್ನ ಉದ್ದೇಶ ಮತ್ತು ನನ್ನ ಅಭಿಪ್ರಾಯ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಖಾಸಗಿಯವರಿಗೆ ಕೊಡುವುದಿರಲಿ, ಅದು ವಿಂಡ್ಸರ್ ಮ್ಯಾನರ್ ಇರಲಿ, ಮತ್ತೊಬ್ಬರು ಇರಲಿ ಯಾರಿಗೂ ಸಹಿತ ಕೊಡಬಾರದು, ಮತ್ತು ಅದರ ಅವಶ್ಯಕತೆಯೂ ಇಲ್ಲ. ಇವರು ಕಟ್ಟಬೇಕೆಂಬ ಕನ್‌ವೆನ್‌ಷನ್ ಹೇಳಿದರೆ, 5-6 ಕಿಲೋಮೀಟರ್ ದೂರದಲ್ಲಿ ಯಾವುದಾದರೊಂದು ಜಾಗವನ್ನು ಹುಡುಕಿ, ಅಲ್ಲಿ ಕಟ್ಟಲಿ ಅದಕ್ಕೆ ನಾವೇನು ವಿರೋಧ ಮಾಡುವುದಿಲ್ಲ. ಇಲ್ಲಿ 3-4 ಕಿಲೋಮೀಟರ್ ಒಳಗಡೆ ಯಾವುದೇ ಕಟ್ಟಡಗಳು ಬರುವುದರಿಂದ, ಬೆಂಗಳೂರು ನಗರದ ಟ್ರಾಫಿಕ್ ಮತ್ತೆ ಜಾಸ್ತಿಯಾಗುತ್ತದೆ. ಮತ್ತು ಮಾನ್ಯ ಭೈರೇಗೌಡರು ಏನು ಹೇಳಿದ್ದಾರೆ, ಇದನ್ನು ಯಾರಿಗೋ ಕೊಡಬೇಕೆನ್ನುವ ಆರೋಪ ಏನು ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರ ಸ್ಪಷ್ಟವಾಗಿ, ಈ ರಾಜ್ಯದ ಜನತೆಗೆ ಮತ್ತು ಈಸದನಕ್ಕೆ ತಿಳಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

* ಶ್ರೀ ವಾಟಾಳ್ ನಾಗರಾಜ್ (ಜಾಮರಾಜನಗರ) :- ಮಾನ್ಯ ಅಧ್ಯಕ್ಷರೇ, ಈ 17 ಏಕರೆ ಪ್ರಮುಖವಾದ ಪ್ರದೇಶದಲ್ಲಿ ಅಂತರ ರಾಷ್ಟ್ರೀಯ ಸಮುದಾಯ ಭವನವನ್ನು ಕಟ್ಟತಕ್ಕ ವ್ಯವಸ್ಥೆ, ಇದರ ಹಿಂದಿರತ್ಕಕ್ಕಂಥ ಒಂದು ಗಂಭೀರವಾದಂಥ ಪರಿಸ್ಥಿತಿ ಈ ಬಗ್ಗೆ ರಾಜ್ಯಸರ್ಕಾರ ಶಾಸನ ಸಭೆಯಲ್ಲಿ ಚರ್ಚೆಯಲ್ಲಿ ತರಬೇಕಾಗಿತ್ತು. ಈಗಾಗಲೇ ಬಹಳ ಬಹಿರಂಗವಾಗಿದೆ. ತಮಗೆ ಗೊತ್ತಿರುವಂತೆ, ಹಿಂದೆ ಕೆಂಗಲ್ ಹನುಮಂತಯ್ಯನವರು ಮುಖ್ಯಮಂತ್ರಿಯಾಗಿದ್ದಾಗ, ವಿಧಾನ ಸೌಧದ ಸುತ್ತ, ರಾಜಭವನದ ಸುತ್ತ ಮತ್ತು ಕಬ್ಬನ್ ಪಾರ್ಕ್ ಸುತ್ತ ಯಾವುದೇ ಕಟ್ಟಡಗಳು ಬರಬಾರದು ಎಂಬುದು ಅವರ ಪ್ರಾಮಾಣಿಕವಾದ ಚಿಂತನೆ ಮತ್ತು ಪ್ರಯತ್ನ . ಇವತ್ತು ಅವರ ಚಿಂತನೆಗೆ ತಿಲಾಂಜಲಿಯಾಗಿ, ಎಲ್ಲಾ ಕಡೆ ಕಟ್ಟಡಗಳು ಬರುತ್ತಾ ಇವೆ. ರಾಜಭವನ ಒಂದು ಪ್ರಮುಖವಾದಂಥ ರಾಜ್ಯದ ರಾಜ್ಯಪಾಲರಿರತಕ್ಕಂಥ ರಾಜಭವನ. ಅದರ ಸುತ್ತ ಹೋಟೆಲುಗಳಿಗೆ ಖಾಸಗಿ ವ್ಯಕ್ತಿಗಳಿಗೆ, ಈ ರೀತಿಯ ಕಟ್ಟಡಗಳನ್ನು ಕಟ್ಟತಕ್ಕ ವ್ಯವಸ್ಥೆ ಸರ್ಕಾರ, ಅದು ಯಾವುದೇ ಸರ್ಕಾರವಿರಲಿ ಕೈಗೊಂಡದ್ದು ಅತ್ಯಂತ ಶೋಚನೀಯ. ತಮಗೆ ಹೇಳುವುದಾದರೆ, ಪರಾಗ್ ಹೋಟೆಲ್ ಬಗ್ಗೆ ಶ್ರೀಮಾನ್ ಭೈರೇಗೌಡರು ಈ ಸದನದಲ್ಲಿ ನಿರಂತರವಾದಂಥ ಹೋರಾಟ ಮಾಡಿದರು. ರಾಜಭವನವನ್ನು ಮೀರಿಸತಕ್ಕಂಥಾದ್ದು ಪರಾಗ್ ಹೋಟೆಲ್ ಪಕ್ಕದಲ್ಲಿ ಬಂದಿದೆ. ಅದಾದ ನಂತರ ಪೋಲೀಸ್ ಕಮೀಷನರ್ ಆಫೀಸ್ ಮುಂದೆ ಇನ್ನೊಂದೆರಡು ಮೂರು ಕಟ್ಟಡಗಳು ಬಂದಿದೆ. ಇವೆಲ್ಲಾ ಕಟ್ಟಡಗಳಿಂದ ರಾಜಭವನ ಸಂಪೂರ್ಣವಾಗಿ ಮುಚ್ಚಿಹೋಗಿದೆ. ರಾಜಭವನದ ಗಾಂಭೀರ್ಯತೆ ಮತ್ತು ರಾಜಭವನದ ವ್ಯಕ್ತಿತ್ವ ಮತ್ತು ರಾಜಭವನ ಶಕ್ತಿ, ಸುತ್ತ ಬಂದಿರತಕ್ಕ ಕಟ್ಟಡಗಳಲ್ಲಿ ಮುಚ್ಚಿಹೋಗಿದೆ. ಇದರ ಜೊತೆಗೆ ವಿಧಾನ ಸೌಧದ ಸುತ್ತ ಸಾಮಾನ್ಯವಾಗಿ ಕಟ್ಟಡಗಳು ಬರಬಾರದು. ತಮಗೆ ಗೊತ್ತಿರುವರೀತಿ ನಮ್ಮ ಹೈಕೋರ್ಟ್ ಕಟ್ಟಡ ಏನಿದೆ, ಇದನ್ನು ಅನೇಕ ಬಾರಿ, ಬೇರೆ ಬೇರೆ ವಿನ್ಯಾಸ ಮಾಡಿ ಕಟ್ಟಬೇಕೆಂಬ ಉದ್ದೇಶ ಇತ್ತು ಆದರೂ, ಒಂದು ಇತಿಹಾಸ ಪ್ರಸಿದ್ಧವಾದಂಥ ಕಟ್ಟಡವನ್ನು ಹಾಗೆಯೇ ಉಳಿಸಬೇಕೆಂದು, ಅದರ ಬಣ್ಣ, ಅದರ ಪರಿಸ್ಥಿತಿಯನ್ನು ಹಾಗೆಯೇ ಉಳಿಸಬೇಕೆಂಬ ದೃಷ್ಟಿಯಿಂದ ಈಗ ದುರಸ್ತಿ ಕಾರ್ಯ ಮಾಡಿ ಉಳಿಸಿದ್ದಾರೆ. ಹನುಮಂತಯ್ಯನವರು ಇದ್ದಾಗ ಕಬ್ಬನ್ ಪಾರ್ಕ್ ಹತ್ತಿರ ಹಿಂದೆ ರಿಸರ್ವ್ ಬ್ಯಾಂಕಿಗೂ ಕೊಡಬಾರದೆಂದು ಹೇಳಿದ್ದರು. ಈಗ ರಿಸರ್ವ್ ಬ್ಯಾಂಕಿಗೆ ಕೊಟ್ಟರು ಮತ್ತು ಕ್ರೀಡೆಗಳನ್ನು ನಡೆಸತಕ್ಕ ಅನೇಕ ಸಂಸ್ಥೆಗಳಿಗೆ ಕೊಟ್ಟು ಕಬ್ಬನ್ ಪಾರ್ಕ್ ಕೂಡ ಸಂಪೂರ್ಣವಾಗಿ ಮುಚ್ಚಿಹೋಗತಕ್ಕ ಪರಿಸ್ಥಿತಿ ಬಂದಿದೆ. ಈ 17 ಏಕರೆ 4 ಗುಂಟೆ ಪ್ರದೇಶವನ್ನು ಸರ್ಕಾರವೇ ಮಾಡಲೀ ಅಥವಾ ಖಾಸಗಿಯವರೇ ಮಾಡಲೀ ಈ ಪ್ರದೇಶವನ್ನು ಯಾರಿಗೂ ಕೊಡಬಾರದೆನ್ನುವುದು ನಮ್ಮ ಸ್ಪಷ್ಟವಾದಂಥ ಅಭಿಪ್ರಾಯ. ಬೆಂಗಳೂರು ನಗರದಲ್ಲಿ ಇಂತಹ ಪ್ರದೇಶ ಎಲ್ಲಿಯೂ ಸಿಕ್ಕುತ್ತಾ ಇಲ್ಲ. ತಮಗೆ ಹೇಳುವುದಾದರೆ, ಇದರ ವಿರುದ್ಧ, ಇದರ ಹಿಂದೆ ಬಾರಿ ದೊಡ್ಡ ಹಗರಣವೇ ಇದೆ. ನಾನು ತಮ್ಮ ಮೂಲಕ ಸರ್ಕಾರವನ್ನು ಕೇಳುವುದೇನೆಂದರೆ, ಇದರ ಬಗ್ಗೆ ಸಮಗ್ರವಾಗಿ ಚರ್ಚೆಯಾಗಬೇಕು. ಮಾನ್ಯಮುಖ್ಯಮಂತ್ರಿಗಳು ವಿದೇಶಕ್ಕೆ ಹೋಗಿ ಬಂದ ವಿಚಾರವನ್ನು ಈ ಸಭೆಗೆ ಹೇಳಬೇಕು. ಏನೇನು ಆಗಿದೆ, ಯಾರು ಯಾರನ್ನು ಕರೆದಿದ್ದಾರೆ. ಯಾವ ಯಾವ ಕೈಗಾರಿಕೋದ್ಯಮಿಗಳನ್ನು ನಮ್ಮ ರಾಜ್ಯಕ್ಕೆ ಕರೆದಿದ್ದಾರೆ, ಇತ್ಯಾದಿ ಪ್ರತಿಯೊಂದನ್ನೂ ಸಮಗ್ರವಾಗಿ ಈ ಸದನಕ್ಕೆ

ಅವರು ಹೇಳಬೇಕಾಗಿತ್ತು, ಅವರು ಹೇಳಲಿಲ್ಲ. ಈಗಲೂ ಕೂಡ ತಮ್ಮ ಮೂಲಕ ಅವರನ್ನು ಪ್ರಾರ್ಥನೆ ಮಾಡುತ್ತೇನೆ. ವಿದೇಶಕ್ಕೆ ಅವರು ಖಾಸಗಿಯಾಗಿಯೇ ಹೋಗಲಿ, ಸರ್ಕಾರದ ಪರವಾಗಿ ಹೋಗಲಿ, ಹೋಗಿಬಂದಮೇಲೆ, ಬಂಡವಾಳ ಹೂಡತಕ್ಕ ಯಾರು ಯಾರನ್ನು ರಾಜ್ಯಕ್ಕೆ ಕರೆದಿದ್ದೀರಿ, ಯಾವ ಯಾವ ದರ್ಜೆಯ ವ್ಯಕ್ತಿಗಳನ್ನು ಕರೆದಿದ್ದೀರಿ, ಏನೇನು ಸಮಾಚಾರ ಎನ್ನುವ ವಿಚಾರಗಳನ್ನು ಈ ಸದನದ ಮುಂದೆ ಅವರು ಹೇಳಬೇಕು. ಈ 17 ಏಕರೆ 4 ಗುಂಟೆ ಪ್ರದೇಶವನ್ನು ಕೊಡಬಾರದೆಂದು ಸರ್ಕಾರದ ಉನ್ನತ ಅಧಿಕಾರಿಗಳು, ಸರ್ಕಾರಕ್ಕೆ ನೇರವಾಗಿ ಹೇಳಿದ್ದಾರೆ. ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಶ್ರೀಮಾನ್ ಮುದ್ದಪ್ಪನವರು ಕೊಡಕೂಡದು ಎಂದು ಹೇಳಿದ್ದಾರೆ. ಮತ್ತು ಲೋಕೋಪ ಯೋಗಿ ಇಲಾಖೆಯ ಶ್ರೀಮಾನ್ ರಮೇಶ್‌ರವರು ಇದನ್ನು ಕೊಡಕೂಡದು ಎಂದು ಹೇಳಿದ್ದಾರೆ. ನಗರಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ವಾಸುದೇವನ್‌ರವರು ಇದನ್ನು ಕೊಡಕೂಡದೆಂದು ಹೇಳಿದ್ದಾರೆ. ಮತ್ತು ಹಣಕಾಸಿನ ಕಾರ್ಯದರ್ಶಿ ಶ್ರೀಮಾನ್ ಭಟ್ಟಾಚಾರ್ಯರವರು ಇದನ್ನು ಕೊಡಕೂಡದು ಎಂದು ಹೇಳಿದ್ದಾರೆ. ಇದೇ ರೀತಿ ಪಾರ್ಥಸಾರಥಿಯವರೂ ಕೂಡ ಹೇಳಿದ್ದಾರೆ. ಈ ರೀತಿ ಎಲ್ಲಾ ಉನ್ನತವಾದ ಅಧಿಕಾರಿಗಳು, ಎಲ್ಲಾ ಇಲಾಖೆಯವರೂ ಇದನ್ನು ವಿರೋಧ ಮಾಡಿದ್ದಾರೆ, ಸರ್ಕಾರಕ್ಕೆ ನೇರವಾಗಿ ಹೇಳಿದ್ದಾರೆ. ಇಷ್ಟೆಲ್ಲಾ ಆದರೂ ಕೂಡ, ಆ 17 ಏಕರೆ 4 ಗುಂಟೆ ಎಂತಹ ಪ್ರದೇಶ, ಅದು ಚಿನ್ನದ ಗಣಿ. ಸ್ವಲ್ಪ ಹೆಚ್ಚುಕಡಿಮೆ 50 ಕೋಟಿ, ನನ್ನ ಪ್ರಕಾರ 70-75 ಕೋಟಿಬೆಲೆ ಆಗತಕ್ಕ ಪ್ರದೇಶ. ಇವತ್ತು ನೀವೇನಾದರೂ ಹರಾಜಿಗೆ ಇಟ್ಟರೆ, 70 ಕೋಟಿಗೂ ಹೋಗುತ್ತದೆ, 100 ಕೋಟಿಗೂ ತೆಗೆದುಕೊಳ್ಳುವವರು ಇದ್ದಾರೆ. ಇವತ್ತು ಆ ಪರಿಸ್ಥಿತಿಯಾಗಿದೆ. ಇಡೀ ಬೆಂಗಳೂರೆ ಬೇರೆ ರೀತಿ ಹೋಗುತ್ತಿದೆ. ತಮಗೆ ಹೇಳುವುದಾದರೆ, ಇವತ್ತು ಬಿ.ಡಿ.ಎ.ನಲ್ಲಿ ನಡೆಯುತ್ತಿರುವುದು ಏನು? ಮೂಲೆ ನಿವೇಶನವನ್ನು ಮಾರಿ, ಅದರಿಂದ ಬಂದ ಹಣದಿಂದ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ಸಂಬಳಸಾರಿಗೆಗಳನ್ನು ತೆಗೆದುಕೊಂಡು, ವ್ಯವಸ್ಥೆ ಮಾಡತಕ್ಕಥಾದ್ದು. ಆ ಮೂಲೆ ನಿವೇಶನವನ್ನು ಯಾರು ಕೊಂಡುಕೊಳ್ಳುವರು. ಎಲ್ಲಾ ಹೊರಗಡೆಯಿಂದ ಬಂದಂಥ ಜನ, ಮೂಲೆ ನಿವೇಶನಗಳನ್ನು ಕೊಂಡುಕೊಂಡು, ಅಲ್ಲಿ ದೊಡ್ಡ ದೊಡ್ಡ, ಆಕಾಶಮಟ್ಟದ ಕಟ್ಟಡಗಳನ್ನು ಕಟ್ಟಿ,, ಇಡೀ ಬೆಂಗಳೂರಿನ ಸೌಂದರ್ಯವನ್ನು ಹಾಳುಮಾಡುತ್ತಿದ್ದಾರೆ. ರಾಜಭವನದ ಪಕ್ಕದಲ್ಲಿರತಕ್ಕಂಥ, ಇಂತಹ ಪ್ರಮುಖವಾದ ಸ್ಥಳವನ್ನು ಯಾವುದೇ ಕಾರಣಕ್ಕೆ ಸರ್ಕಾರ ಪರಭಾರೆ ಮಾಡಬಾರದು, ಅಲ್ಲಿ ಯಾವುದೇ ಕಟ್ಟಡ ಬರಕೂಡದು ಎಂಬ ಮಾತನ್ನು ಸ್ಪಷ್ಟವಾಗಿ ಹೇಳುತ್ತೇನೆ. ಇದರ ಬಗ್ಗೆ ಮುಖ್ಯಮಂತ್ರಿಗಳು ಒಂದು ಹೇಳಿಕೆಯನ್ನು ಕೊಡಿಸಬೇಕೆಂದು ತಮ್ಮಲ್ಲಿ ಕಳಕಳಿಯಿಂದ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಭಾರಿ ಮತ್ತು ಮಧ್ಯಮ ಕೈಗಾರಿಕಾ ಸಚಿವರು):- ಸನ್ಮಾನ್ಯ ಅಧ್ಯಕ್ಷರೇ, ಈಗಾಗಲೇ ಈ ವಿಷಯದ ಬಗ್ಗೆ ಮಾನ್ಯ ಸಿದ್ಧಾಜಿಯವರು, ಭೈರೇಗೌಡರು ಮತ್ತು ವಾಟಾಳ್ ನಾಗರಾಜರವರು, ಅಲ್ಲಿ ಈ ಕನ್‌ವೆನ್‌ಷನ್ ಸೆಂಟರನ್ನು ಕಟ್ಟುವುದರ ಬಗ್ಗೆ ಕೆಲವು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಪ್ರಸ್ತಾಪ ಮಾಡತಕ್ಕ ಸಮಯದಲ್ಲಿ,ಇದನ್ನು ಬಹಳ ತರಾತುರಿಯಲ್ಲಿ, ಬಹಳ ದೊಡ್ಡ ಆಸ್ತಿಯನ್ನು ಯಾರೋ ಖಾಸಗಿ ವ್ಯಕ್ತಿಗಳಿಗೆ ಅಥವಾ ಕಂಪನಿಗಳಿಗೆ ವಿಲೇವಾರಿ ಮಾಡುತಿದ್ದಾರೆ ಎಂಬತಕ್ಕಂಥ ಆಪಾದನೆಯನ್ನೂ ಕೂಡ,

ಅವರು ಅಪ್ರತ್ಯಕ್ಷವಾಗಿ ಮಾಡಿದ್ದಾರೆ. ಅಧ್ಯಕ್ಷರೇ, ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ಒಂದು ಮಾತನ್ನು ತರಬಯಸುತ್ತೇನೆ. ಈ ಕನ್‌ವೆನ್‌ಷನ್ ಸೆಂಟರನ್ನು ಬೆಂಗಳೂರಿನಲ್ಲಿ ಸ್ಥಾಪನೆ ಮಾಡತಕ್ಕಂಥ ಅಭಿಪ್ರಾಯ ಇವತ್ತಿನದಲ್ಲ. ಈ ಸೆಂಟರ್‌ಸ್ಥಾಪನೆ ಮಾಡಬೇಕೆಂದು, ಜನತಾ ಸರ್ಕಾರದಲ್ಲಿಯೇ 1988ರಲ್ಲಿ, ಒಂದು ಸಿಂಗಾಪುರ ಗುಂಪನ್ನು 17ನೇ ನವೆಂಬರ್ 1988 ರಲ್ಲಿ ಅಂದಿನ ಬಿ.ಡಿ.ಎ ಚೇರ್ಮನ್ ಆದ, ಹೆಚ್.ಜಿ.ವಿ.ರೆಡ್ಡಿಯವರನ್ನು ಭೇಟಿ ಮಾಡಿ, ಕೆಲವು ಮಾತುಕತೆ ನಡೆದಿತ್ತು. ಇಲ್ಲಿ ಒಂದು ಒಳ್ಳೆಯ ಸಮ್ಮೇಳನ ಸಭಾಂಗಣ ಮಾಡಬೇಕು, ಏಕೆಂದರೆ ವಾತಾವರಣವೂ ಚೆನ್ನಾಗಿದೆ. ಯಾವರೀತಿಯಾಗಿ ಡೆಲ್ಲಿಯಲ್ಲಿ ವಿಜ್ಞಾನಭವನ ಇದೆ, ಅದೇರೀತಿಯಾಗಿ ಕರ್ನಾಟಕ ರಾಜ್ಯದಲ್ಲೂ ಅದರಲ್ಲೂ ವಿಶೇಷವಾಗಿ ಬೆಂಗಳೂರಿನಲ್ಲಿ ಇದನ್ನು ಮಾಡಿದರೆ. ಅಂತರ ರಾಷ್ಟ್ರೀಯ ಪ್ರವಾಸಿಗರನ್ನೂ ನಾವು ಆಕರ್ಷಣೆ ಮಾಡಿಕೊಂಡಹಾಗೆ ಆಗುತ್ತದೆ ಮತ್ತು ಟೂರಿಸಂ ಕೂಡ ಬೆಳವಣಿಗೆಯಾಗುತ್ತದೆ, ಅದರಿಂದ ವ್ಯಾಪರಕ್ಕೂ ಕೂಡ ಪ್ರೋತ್ಸಾಹ ಬರುತ್ತದೆ ಎನ್ನತಕ್ಕಂಥ ದೃಷ್ಟಿಯಿಂದ, ಅಂದಿನ ಕಾಲದಿಂದ ಈ ವಿಚಾರ ನಡೆದಿದೆ. ಇವತ್ತೇನು ಹೊಸದಾಗಿ ಇದು ಉದ್ಭವವಾದಂಥಾದ್ದು ಅಥವಾ ನಾವು ಸೃಷ್ಟಿ ಮಾಡಿದಂತಾದ್ದು ಅಥವಾ ನಮ್ಮ ಮುಖ್ಯಮಂತ್ರಿಗಳು ಸೃಷ್ಟಿ ಮಾಡಿದಂಥಾದ್ದಲ್ಲ. ಅದಕ್ಕಾಗಿ ಯಾಕೋ ಒಬ್ಬ ಖಾಸಗಿ ವ್ಯಕ್ತಿಗೆ ಕೊಡತಕ್ಕಂತಾದ್ದು ಅಥವಾ ಅವರಿಗೆ ಕೊಡುವುದಕ್ಕೋಸ್ಕರವೇ ಹೊಸ ವಿಚಾರ ಹುಡುಕಿ, ಮಾಡುತ್ತಿದ್ದೇವೆ ಎಂದಲ್ಲ. ಈ ಕನ್‌ವೆನ್‌ಷನ್ ಸೆಂಟರ್ ಮಾಡುವಾಗ, ಯಾವ ಟೈಪ್ ಕನ್‌ವೆನ್‌ಷನ್ ಸೆಂಟರ್ ಮಾಡಬೇಕು, ಡೆಲ್ಲಿಯಲ್ಲಿರತಕ್ಕ ವಿಜ್ಞಾನ ಭವನದ ಟೈಪ್ ಮಾಡಬೇಕೋ ಅಥವಾ ಅದು ಸೆಲ್ಫ್‌ಸಫಿಷಿಯೆಂಟಾಗಿ, ತನ್ನ ಕಾಲಿನಮೇಲೆ ತಾನು ನಿಲ್ಲತಕ್ಕ ಶಕ್ತಿ ಅದಕ್ಕಿರಬೇಕೋ, ಏಕನಾಮಿಕಲಿ ವಯೋಬಿಲಿಟಿ ಇರಬೇಕೋ ಹೇಗೆ ಎನ್ನತಕ್ಕಂಥಾದ್ದನ್ನು ಕೂಡ ನಾವು ಚಿಂತನೆ ಮಾಡಬೇಕಾದ ಪ್ರಸಂಗ ಬಂದಿದೆ. ಏಕೆಂದರೆ, ನಾವು ಇವತ್ತು ಬರೀ ಕನ್‌ವೆನ್‌ಷನ್ ಸೆಂಟರ್ ಮಾಡುವಾಗ, 30-40 ಕೋಟಿ ರೂಪಾಯಿಗಳನ್ನು ಅದರಲ್ಲಿ ಹಾಕಿದಮೇಲೆ, ಮುಂದೆ ಅದನ್ನು ಮೆಯಿನ್‌ಟೇನ್ ಮಾಡತಕ್ಕಂಥಾದ್ದು ಹೇಗೆ? ಅದಕ್ಕೆ ಯಾವ ಸೋರ್ಸ್‌ನಿಂದ ಮಾಡಬೇಕು, ಇದು ಒಂದು ಪ್ರಶ್ನೆ. ಎರಡನೆಯದು, ಇಲ್ಲಿ ಮಾಡಬೇಕು? ಏನೋ ಎಲ್.ಆರ್.ಡಿ.ಇ. ಖಾಲಿ ಜಾಗ ಇದೆ ಎಂದು ಸರ್ಕಾರದ ಮುಂದೆ ಪ್ರಸ್ತಾವನೆ ಇದೆ. ಇಲ್ಲಿ 17 ಏಕರೆ 14 ಗುಂಟೆ ಜಾಗ ವಿಧಾನ ಸೌಧದ ಸಮೀಪ ಮತ್ತು ಹಾರ್ಟ್ ಆಫ್ ದಿ ಸಿಟಿ ಇರುವುದರಿಂದ ಬಹುಶಃ ಇದು ಎಲ್ಲಾ ದೃಷ್ಟಿಯಿಂದ ಅನುಕೂಲವಾಗಬಹುದು ಎನ್ನುವ ರೀತಿಯಲ್ಲಿ ಇವತ್ತು ಇದರ ಬಗ್ಗೆ ಚಿಂತನೆ ಮತ್ತು ಯೋಚನೆಯನ್ನು ಸರ್ಕಾರ ಮಾಡುತ್ತಿದೆ. ಆದರೆ, ಇಲ್ಲಿ ಬೇಡ, ಬೇರೆ ಕಡೆ ಮಾಡಬಹುದು, ಇದು ಲಂಗ್ಸ್ ಸ್ಪೇಸ್ ಆಗಿ ಇರಬೇಕು ಎನ್ನತಕ್ಕಂಥ ಅನೇಕ ಜನರ ಒತ್ತಾಯ ಇವತ್ತು ಬರುತ್ತಿದೆ. ಕೌನ್ಸಿಲ್‌ನಲ್ಲೂ ಈ ಪ್ರಶ್ನೆ ಬಂದಿತ್ತು. ಇದು ಇವತ್ತು ಅಸೆಂಬ್ಲಿಯಲ್ಲೂ ಬಂದಿದೆ. ಮತ್ತು ಕೆಲವು ಅಧಿಕಾರಿಗಳೂ ಕೂಡ ಹೇಳುತ್ತಿದ್ದಾರೆ. ಅಧಿಕಾರಿಗಳು ಪರವಾಗಿಯೂ ಹೇಳುತ್ತಾರೆ, ಎಗೆನೆಸ್ಟ್ ಹೇಳುತ್ತಾರೆ ಆದರಿಂದ ಇದರ ಬಗ್ಗೆ ನಾವೂ ನೀವೂ ಏನು ಯೋಚನೆ ಮಾಡಬೇಕೆಂದರೆ, ಈ ರಾಜ್ಯದ ಹಿತದೃಷ್ಟಿಯಿಂದ ಯಾವುದು ಒಳ್ಳೆಯಾದಾಗುತ್ತದೆ. ಕನ್‌ವೆನ್‌ಷನ್ ಸೆಂಟರ್ ಮಾಡುವುದರಿಂದ ಒಳ್ಳೆಯದಾಗುತ್ತದೆಯೇ? ಕೆಟ್ಟದ್ದಾಗುತ್ತದೆಯೇ? ಅದರ ಪರಿಣಾಮ ಏನಾಗುತ್ತದೆ ಎಂದು ಚಿಂತನೆ ಮಾಡಿ ನಾವು ನಿರ್ಣಯ ತೆಗೆದುಕೊಳ್ಳಬೇಕಾಗುತ್ತದೆ. ನಮ್ಮ ಇಂಡಸ್ಟ್ರಿ ಡಿಪಾರ್ಟ್‌ಮೆಂಟಿನಲ್ಲಿ ಸಿಂಗಲ್

ವಿಂಡೋ ಏಜೆನ್ಸಿ ಇರುವುದು ತಮಗೂ ಗೊತ್ತಿದೆ. ಆ ಸಿಂಗಲ್ ವಿಂಡೋ ಏಜೆನ್ಸಿಯಲ್ಲಿ ಎಲ್ಲಾ ಅಧಿಕಾರಿಗಳೂ ಬಂದಿರುತ್ತಾರೆ. ಅವರೆಲ್ಲಾ ತಮ್ಮ ತಮ್ಮ ವಿಚಾರಗಳನ್ನು ಹೇಳಿದ ನಂತರ ಕೊನೆಗೆ ಒಂದು ನಿರ್ಣಯವಾಗುತ್ತದೆ. ಆಮೇಲೆ ಇದು ನಮ್ಮದಲ್ಲ ಎಂದು ಯಾರೂ ಹೇಳುವ ಹಾಗಿಲ್ಲ. ಎಲ್ಲಾ ಇಲಾಖೆಯವರು ಇಲ್ಲಿ ಒಪ್ಪಿಕೊಂಡು ನಂತರ ಅದು ನಮಗೆ ಬೇಡ ಎಂದು ಹೇಳಿದರೆ ಅದಕ್ಕೆ ಅರ್ಥವೇ ಇರುವುದಿಲ್ಲ. ಆದರೂ ಅನೇಕ ಸಾರಿ ಹೀಗಾಗುತ್ತಿರುತ್ತವೆ. ಅದರ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪ ಮಾಡುವುದಿಲ್ಲ. ಆದರೆ ಇಲ್ಲಿ ಮಾಡತಕ್ಕಂಥಾದ್ದು ಯೋಗ್ಯವೋ ಅಥವಾ ಅಲ್ಲವೋ ಎಂದು ನಾವು ಯೋಚನೆ ಮಾಡಬೇಕಾಗಿದೆ. ಕನ್‌ವೆನ್‌ಷನ್ ಸೆಂಟರ್‌ನ್ನು ಯಾರೇ ಮಾಡಬೇಕಾದರೂ ಸಹಾ ಅದರ ವಯಬಿಲಿಟಿ ನೋಡಿಯೇ ಹಣವನ್ನು ತೊಡಗಿಸುತ್ತಾರೆ. ಎಲ್ಲಿ ಸೆಂಟರ್ ಇದೆ? ಎಲ್ಲರಿಗೂ ಎಲ್ಲಿ ಅನುಕೂಲವಾಗುತ್ತದೆ? ಆದರಿಂದ ಎಲ್ಲಿ ಪ್ರಯೋಜನವಾಗುತ್ತದೆ ಎನ್ನತಕ್ಕಥಾದ್ದನ್ನು ನಾವು ನೋಡಬೇಕಾಗುತ್ತದೆ. ಹೋದ ಸಲ ಒಂದು ಜಪಾನೀಸ್ ಟೀಮ್ ಬಂದಿತ್ತು. ಅವರು ಹರಿಯಾಣದಲ್ಲೂ ಒಂದು ಪ್ಲಾಟ್ ನೋಡಿದ್ದರು, ಶ್ರೀಮಾನ್ ಸಿಂಧ್ಯಾಜಿಯವರ ಕಾನ್ಸ್ಟಿಟ್ಯೂಯೆನ್ಸಿಯಲ್ಲೂ ಒಂದು ಪ್ಲಾಟ್ ನೋಡಿದ್ದರು. ಆಮೇಲೆ ಸಿಂಧ್ಯಾಜಿಯವರ ಕಾನ್ಸ್ಟಿಟ್ಯೂನ್ಸಿಯೆಯಲ್ಲಿಯೂ ಜಾಗ ಸರಿ ಇದೆ ಎಂದು ಅವರು ಒಪ್ಪಿಕೊಂಡು ಹೋಗಿದ್ದರು. ಅವರು ಒಪ್ಪಿಕೊಂಡು ಹೋಗಿ ಏನಾದರೂ ಮಾಡುವಷ್ಟರಲ್ಲಿ ಅದು ಬೇಡ ಎಂದು ನಮ್ಮಲ್ಲಿ ದೊಡ್ಡ ಎಜಿಟೇಷನ್ ಆಯಿತು. ಅವರು ಎಕನಾಮಿಕಲ್ ವಯಬಿಲಿಟಿ ನೋಡುತ್ತಾರೆ, ಮತ್ತು ಏರ್‌ಪೋರ್ಟ್ ನೋಡುತ್ತಾರೆ. ಈ ಕನ್‌ವೆನ್‌ಷನ್ ಸೆಂಟರ್ ಅನ್ನು ಮಾಗಡಿಯಲ್ಲೋ ಕನಕಪುರದಲ್ಲೋ ಮಾಡಿ ಎಂದರೆ ಯಾರು ಮುಂದೆ ಬರುತ್ತಾರೆ? ಇಲ್ಲೆಯೇ ಆಗಬೇಕೆಂದು ಮತ್ತು ಇಂಥವರಿಗೇ ಕೊಡಬೇಕೆಂದು ನಮ್ಮ ಹಠ ಇಲ್ಲ. ನಾವು ಇನ್ನೂ ಡಿಸೈಡ್ ಮಾಡಿಲ್ಲ. ಈಗ ಗ್ಲೋಬಲ್ ಟೆಂಡರ್ ಕರೆದಿದ್ದೇವೆ. ಒಂದು ನೋಟಿಫಿಕೇಷನ್ ಮಾಡಿ ಪ್ರಪಂಚದ ಎಲ್ಲಾ ಪತ್ರಿಕೆಗಳಲ್ಲೂ ಜಾಹಿರಾತು ಕೊಟ್ಟಿದ್ದೇವೆ. ಅದರಲ್ಲಿ ಯಾರು ನಮ್ಮ ಕಂಡಿಷನ್‌ಗೆ ಒಪ್ಪಿ ಬರುತ್ತಾರೋ ಅವರಿಗೆ ಕೊಡಬೇಕೆನ್ನುವ ಯೋಚನೆ ಇಟ್ಟುಕೊಂಡಿದ್ದೇವೆ. ವಿಂಡ್‌ಸರ್ ಮ್ಯಾನರ್, ತಾಜ್ ಅಥವಾ ಫಾರೀನ್ ಗ್ರೂಪ್ ಮತ್ತು ಯಾವುದಾದರೂವ್ಯಕ್ತಿಗೆ ಕೊಡಬೇಕು ಎನ್ನತಕ್ಕಂಥ ನಿರ್ಣಯವನ್ನು ನಾವು ತೆಗೆದುಕೊಂಡಿಲ್ಲ. ಯಾರೋ ಒಬ್ಬ ವ್ಯಕ್ತಿಗೆ ಅಥವಾ ಯಾವುದೋ ಕಂಪನಿಗೆ ಸಹಾಯ ಮಾಡಬೇಕೆಂದು ಇವರು ಮಾಡುತ್ತಿದ್ದಾರೆಂದು ಅಲಿಗೇಷನ್ ಮಾಡಿದರೆ ನಾವು ಕೆಲಸ ಮಾಡುವುದೇ ಕಷ್ಟವಾಗುತ್ತದೆ. ಇದನ್ನು ತರಾತುರಿಯಲ್ಲಿ ತೆಗೆದುಕೊಳ್ಳಬೇಕೆಂದು ಇಲ್ಲ. ಇದು 88ನೇ ಇಸವಿಯಿಂದ ನಡೆಯುತ್ತಿದೆ. ಇನ್ನೂ ಎಷ್ಟು ಸಮಯ ಬೇಕು? ಎಂಬುದರ ಬಗ್ಗೆ ತಾವು ಆಲೋಚನೆ ಮಾಡಿ. ಈ ಕನ್‌ವೆನ್‌ಷನ್ ಸೆಂಟರ್‌ಗೆ ಈಗ ಅಡಿಗಲ್ಲುಹಾಕಿದ್ದಲ್ಲ, 1992ರಲ್ಲೇ ಶ್ರೀಮಾನ್ ಬಂಗಾರಪ್ಪನವರು ಚೀಫ್ ಮಿನಿಸ್ಟರ್ ಇದ್ದಾಗಲೇ ಇದನ್ನು ಮಾಡಿಯಾಗಿತ್ತು. ಆದರೆ ಯಾವ ಟೈಪ್ ಮಾಡಬೇಕೆಂಬುದರ ಬಗ್ಗೆ ತಮ್ಮ ವಾದ ಇದೆ ಎಂದರೆ ನಾನು ಒಪ್ಪಿಕೊಳ್ಳುತ್ತೇನೆ. ಅಲ್ಲಿ ಹೋಟೆಲ್ ಬರಬಾರದು, ಶಾಪಿಂಗ್ ಕಾಂಪ್ಲೆಕ್ಸ್ ಬರಬಾರದು, ಕೇವಲ ಕನ್‌ವೇನ್‌ಷನ್ ಸೆಂಟರ್ ಮಾತ್ರ ಬರಬೇಕೆಂಬ ನಿಮ್ಮ ವಾದ ಇದ್ದರೆ ಅದು ಬೇರೆ ವಿಚಾರ. ಆದರೆ ಅದಕ್ಕೆ ಏಕನಾಮಿಕಲಿ ವಯಬಿಲಿಟಿ ಇರಬೇಕು ಸರಿಯಾಗಿ ನಡೆಸಿಕೊಂಡು ಹೋಗಬೇಕು, ಶಿಸ್ತು ರೀತಿಯಿಂದ ನಡೆಸಬೇಕು, ಒಳ್ಳೆ ರೀತಿಯಿಂದ ಮೇನ್‌ಟೇನ್ ಮಾಡಬೇಕು? ಅನ್ನತಕ್ಕಂಥಾದ್ದು ಇದ್ದರೆ, ಅದರ ಸಪೋರ್ಟಿಂಗ್

ಯೋಜನೆಗಳ ಬಗ್ಗೆಯೂ ನಾವು ಚಿಂತನೆ ಮಾಡೋಣ. ಅದಕ್ಕಾಗಿ ಇದರ ಬಗ್ಗೆ ಗ್ಲೋಬಲ್ ಟೆಂಡರ್ ಕರೆದು ಸರ್ಕಾರ ಯೋಜನೆ ಮಾಡುತ್ತಿದೆ. ಸರಿ ಇಲ್ಲವೆಂದರೆ ನಾವು ಎಕ್ಸಾಮಿನ್ ಮಾಡುವುದಕ್ಕೆ ರೆಡಿ ಇದ್ದೇವೆ. ಇದರಲ್ಲಿ ನಮ್ಮ ಪ್ರತಿಷ್ಠೆ ಪ್ರಶ್ನೆ ಇಲ್ಲ. ಹೀಗೆ ಮಾಡಬೇಕು, ಇವತ್ತೇ ಮಾಡಬೇಕೆಂದೇನೂ ಇಲ್ಲ. ಮತ್ತು ಯಾರೂ ಸಹಾ ಈ ಸಂದರ್ಭದಲ್ಲಿ ನಿರ್ಣಯ ತೆಗೆದು ಕೊಳ್ಳುವುದಕ್ಕೆ ಹೋಗುವುದಿಲ್ಲವೆಂದು ತಮಗೂ ಗೊತ್ತೇ ಇದೆ. ಇಲ್ಲಿ ಕನ್‌ವೆನ್‌ಷನ್ ಸೆಂಟರ್ ಮಾಡಿದರೆ ಅನೇಕ ಇಂಟರ್‌ನ್ಯಾಷನಲ್ ಕಾನ್‌ಫರೆನ್ಸಸ್ ಮಾಡುವುದಕ್ಕೆ ಅನುಕೂಲವಾಗುತ್ತದೆ. ಅನ್ನತಕ್ಕಂಥ ಮಾತನ್ನು ತಾವು ಕೂಡ ಒಪ್ಪಿದಿರಿ, ನಾನೂ ಒಪ್ಪುತ್ತೇನೆ. ಅದು ಎಲ್ಲರಿಗೂ ಕನ್‌ವೀನಿಯಂಟ್ ಪ್ಲೇಸ್ ಇರಬೇಕು. ಆದ್ದರಿಂದ ಈ ದಿಕ್ಕಿನಲ್ಲಿ ನಾವು ಯೋಚನೆ ಮಾಡುತ್ತಿದ್ದೇವೆ. ಇದು ಸರಿಯಿಲ್ಲವೆಂದು ತಮ್ಮ ಅನಿಸಿಕೆಯಾದರೆ ಇದರ ಬಗ್ಗೆ ಮರು ಪರಿಶೀಲನೆ ಮಾಡುವ ಸಾಧ್ಯತೆ ಇದೆ ಎನ್ನುವ ಮಾತನ್ನು ಹೇಳಿ, ಮಾನ್ಯ ಮುಖ್ಯ ಮಂತ್ರಿಯವರು ಇದಕ್ಕಾಗಿಯೇ ಫಾರಿನ್ ಟೂರ್ ಹೋಗಿದ್ದರೆಂದು ತಾವು ಹೇಳಿರುವುದು ಸರಿಯಲ್ಲ. ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಸಿ.ಭೈರೇಗೌಡ : ಲಾಸ್‌ಎಂಜಲೀಸ್‌ನಲ್ಲಿ ಪ್ರೆಸ್ ಕಾನ್‌ಫರೆನ್ಸ್ ಅಡ್ರಸ್ ಮಾಡುತ್ತಾ ಇದನ್ನು ಹೇಳಿದ್ದಾರೆ. ಎಂದು ನಾನು ಹೇಳಿದ್ದೇನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ : ಕೊಡುವುದಕ್ಕೆ ಒಪ್ಪಿಕೊಂಡು ಈ ವ್ಯವಸ್ಥೆ ಮಾಡಿದ್ದಾರೆಂದು ತಾವು ಹೇಳಿದ್ದು ಅದು ಸರಿಯಲ್ಲ. ಅನೇಕ ಸಾರಿ ಮುಖ್ಯ ಮಂತ್ರಿಗಳು ಫಾರಿನ್ ಕಂಟ್ರೀಸ್‌ಗೆ ಹೋದಾಗ ಅನೇಕ ಜನ ಬೇಟಿಯಾಗುತ್ತಾರೆ. ಹೊಸ ಇಂಡಸ್ಟ್ರಿಗಳನ್ನು ಹಾಕತಕ್ಕಂಥವರು ಬೇಟಿಯಾಗುತ್ತಾರೆ, ಎಂಟ್ರಪ್ರಿನರ್ಸ್ ಬೇಟಿಯಾಗುತ್ತಾರೆ. ಆಗ ಅದರ ಬಗ್ಗೆ ಚರ್ಚೆ ಮಾಡುತ್ತಾರೆ. ಚರ್ಚೆ ಮಾಡುವುದೇ ತಪ್ಪು, ಚರ್ಚೆ ಮಾಡಬಾರದೆಂದು ಹೇಳುವುದು ಸರಿಯಲ್ಲ. ಅದನ್ನು ಇಂಥವರಿಗೇ ಕೊಡಬೇಕೆಂದು ಯಾವ ನಿರ್ಣಯವನ್ನೂ ಮಾಡಿಲ್ಲ. ಅದಕ್ಕಾಗಿ ತಾವು ಭಯಪಡತಕ್ಕಂಥ ಅವಶ್ಯಕತೆ ಇಲ್ಲ. ಏನಾದರೂ ಮಾಡಿದರೆ, ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ರಾಜ್ಯದ ಹಿತದೃಷ್ಟಿಯಿಂದಲೇ ನಮ್ಮ ನಿರ್ಣಯ ಇರುತ್ತದೆ ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.